ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ADMIO/EST1(17)/52/2021

ಆಯುಕ್ತರ ಕಚೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-01, ದಿನಾಂಕ: 04.08.2022

# ಸುತ್ತೋಲೆ

| | |
|---|---|
| ವಿಷಯ: | ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಅನುದಾನಿತ ಇಂಜಿನಿಯರಿಂಗ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡೆ ಹಾಗೂ ಗ್ರಂಥಪಾಲಕರುಗಳಿಗೆ CAS (ವೃತ್ತಿ ಪದೋನ್ನತಿ)ಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವ ಬಗ್ಗೆ. |
| ಉಲ್ಲೇಖ: | 1) ಸರ್ಕಾರದ ಆದೇಶ ಸಂಖ್ಯೆ: ಇಡಿ/186/ಡಿಟಿಇ/2020 ದಿನಾಂಕ:31.03.2022<br>2) ಈ ಕಛೇರಿ ಸುತ್ತೋಲೆ/ತಿದ್ದುಪಡಿ ಆದೇಶ ಸಂಖ್ಯೆ: ADMIO/EST/10/2021, ದಿ:04.01.2021 ಮತ್ತು 02.02.2022.(ಮಾಹಿತಿಗಾಗಿ ಮಾತ್ರ) . |

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಒಳಪಡುವ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರಗಳಿಗೆ(ಗ್ರೂಪ್- ಎ ವೃಂದ) ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ (ಸಿಎಎಸ್) ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಮಂಜೂರು ಮಾಡಲು ಪತ್ಯೇಕ ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,ಇವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಉಲ್ಲೇಖ (2) ರ ಸುತ್ತೋಲೆ/ತಿದ್ದುಪಡಿ ಆದೇಶವನ್ನು ಈಗಾಗಲೇ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.(ಮಾಹಿತಿಗಾಗಿ ಮಾತ್ರ)

ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ IQAC ಇಲ್ಲದಿದ್ದಲ್ಲಿ IQAC ನ್ನು ನಿಯಮಾನುಸಾರ ರಚಿಸುವುದು. (ಇಲಾಖಾ ವೆಬ್‌ಸೈಟ್‌ನ್ನು ನೋಡುವುದು).

ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳು ಉಲ್ಲೇಖ (2) ರ ಸುತ್ತೋಲೆ ಹಾಗೂ IQAC ರಚನೆ ಬಗ್ಗೆ ಸಂಪೂರ್ಣವಾಗಿ ಅರ್ಥೈಸಿಕೊಂಡು ದಿನಾಂಕ:07.11.2015 ರೊಳಗೆ AICTE 2012 ರೆಗ್ಯೂಲೇಷನ್ ಅನ್ವಯ CAS ಗೆ ಅರ್ಹತೆ ಹೊಂದಿರುವ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡೆ ಹಾಗೂ ಗ್ರಂಥಪಾಲಕರುಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡಿ, ನಂತರ ಅರ್ಹ ಬೋಧಕ ಸಿಬ್ಬಂದಿಗಳ ವಿದ್ಯಾರ್ಹತೆ, ಸೇವಾನುಭವ, ಪಡೆದ ತರಬೇತಿ ವಿವರಗಳು ಹಾಗೂ ಅನ್ವಯಿಸುವ/ಸಂಬಂಧಿಸಿದ ದಾಖಲೆಗಳನ್ನು ದೃಢೀಕರಿಸಿ, ಸಂಸ್ಥೆಯ ಹಂತದ IQAC ಗೆ ದಿನಾಂಕ: 16.08.2022 ರೊಳಗೆ ಸಲ್ಲಿಸುವಂತೆ ಸೂಚಿಸುವುದು.

ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿರುವ IQAC ಯಲ್ಲಿ ಅರ್ಹ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡೆ ಹಾಗೂ ಗ್ರಂಥಪಾಲಕರುಗಳು CAS ಪದೋನ್ನತಿ ಸಂಬಂಧ ಸಲ್ಲಿಸಿದ ದೃಢೀಕೃತ ದಾಖಲಾತಿಗಳನ್ನು ಕೂಲಕಂಷವಾಗಿ ಪರಿಶೀಲಿಸಿ, ಅರ್ಹ ಉಪನ್ಯಾಸಕರುಗಳ ಕಾರ್ಯನಿರ್ವಹಣೆಯ ಬಗ್ಗೆ ತೃಪ್ತಿಕರ ವರದಿ, ಯಾವುದಾದರೂ ನ್ಯಾಯಾಂಗ ಪ್ರಕರಣವಿದ್ದಲ್ಲಿ ಅದರ ಬಗ್ಗೆ ವಿವರ, ಇಲಾಖಾ ವಿಚಾರಣೆ ಇದ್ದಲ್ಲಿ ಅದರ ಬಗ್ಗೆ ವಿವರ, ಮಹಾಲೇಖಪಾಲರ ಆಕ್ಷೇಪಣೆಗಳಿದ್ದಲ್ಲಿ ಅದರ ಬಗ್ಗೆ ವಿವರ ಮತ್ತು ಇಲಾಖಾ ಲೆಕ್ಕತಪಾಸಣಾ ಆಕ್ಷೇಪಣೆಗಳಿದ್ದಲ್ಲಿ ಅದರ ಬಗ್ಗೆ ವಿವರಗಳೊಂದಿಗೆ ಸೇವಾ ಪುಸ್ತಕಗಳನ್ನು ಆಯುಕ್ತಾಲಯಕ್ಕೆ ಮುಂದಿನ ಕ್ರಮಕ್ಕಾಗಿ ದಿನಾಂಕ:01.09.2022 ರೊಳಗೆ ಸಲ್ಲಿಸತಕ್ಕದ್ದು.

CAS ಸಂಬಂಧ ಸಧ್ಯದಲ್ಲೇ ವಿಡಿಯೋ ಕಾನ್ಫರೆನ್ಸ್ ನಡೆಸಲಾಗುವುದು.

04/08/2022

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

1) ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ